REGISTERED WITH RNI NEW DELHI REG. N0.69683/97-Postal Registration No.RNP/KA/BGS/2259/2024-2026
Office of Posting: Bangalore PSO, Bangalore - 560026.; Date of Posting & Publishing Every Wednesday; Price Rs. 2 (Pages-8)

ಪಟ್ಟಣ ಸಹಕಾರ ಬ್ಯಾಂಕುಗಳ

# ವಾರ್ತಾ ಪತ್ರಿಕೆ

ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳದ ಅಧಿಕೃತ ವಾರಪತ್ರಿಕೆ

ಸಂಪುಟ : 31 । ಸಂಚಿಕೆ : 29 । 23 ಅಕ್ಟೋಬರ್ 2024 । ಬುಧವಾರ । ಪುಟಗಳು : 8 । ಬೆಲೆ : 2/-

## ಪ್ರಿಯದರ್ಶಿನಿ ಮಹಿಳಾ ಅರ್ಬನ್ ಸಹಕಾರ ಬ್ಯಾಂಕಿನ ಬೆಳ್ಳಿ ಮಹೋತ್ಸವ ಸಮಾರಂಭ
## ಮಹಿಳೆಯರಲ್ಲಿ ನಾಯಕತ್ವ ಗುಣ ಬೆಳೆಸುತ್ತಿರುವ ಬ್ಯಾಂಕ್ : ಸಚಿವ ಶ್ರೀ ಎಚ್.ಕೆ. ಪಾಟೀಲ



**ಹಾವೇರಿ :** ಅರ್ಬನ್ ಸಹಕಾರಿ ಬ್ಯಾಂಕ್‌ಗಳು ಕೇವಲ ಹಣದ ವ್ಯವಹಾರಕ್ಕೆ ಮಾತ್ರ ಸೀಮಿತವಾಗಿರದೇ ಪ್ರಜಾಪ್ರಭುತ್ವದಲ್ಲಿ ನಾಯಕತ್ವ ಬೆಳೆಸುವ ಸಹಕಾರಿ ಸಂಸ್ಥೆಗಳಾಗಿವೆ. ಈ ನಿಟ್ಟಿನಲ್ಲಿ ಹಾವೇರಿಯ ಪ್ರಿಯದರ್ಶಿನಿ ಮಹಿಳಾ ಅರ್ಬನ್ ಸಹಕಾರಿ ಬ್ಯಾಂಕ್ ಮಹಿಳೆಯರಲ್ಲಿ ನಾಯಕತ್ವ ಗುಣಗಳನ್ನು ಬೆಳೆಸುತ್ತಿರುವ ಕಾರ್ಯ ಶ್ಲಾಘನೀಯವಾಗಿದೆ ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಪ್ರವಾಸೋದ್ಯಮ ಸಚಿವರಾದ ಶ್ರೀ ಎಚ್.ಕೆ. ಪಾಟೀಲರು ಹೇಳಿದರು.

ನಗರದ ರಜನಿ ಸಭಾಂಗಣದಲ್ಲಿ ದಿನಾಂಕ:



20.10.2024ರಂದು ಏರ್ಪಡಿಸಿದ್ದ ಪ್ರಿಯದರ್ಶಿನಿ ಮಹಿಳಾ ಅರ್ಬನ್ ಸಹಕಾರ ಬ್ಯಾಂಕ್‌ನ ಬೆಳ್ಳಿ ಮಹೋತ್ಸವ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು. ಮಹಿಳೆಯರೇ ಕಟ್ಟಿ ಬೆಳೆಸಿದ ಬ್ಯಾಂಕು ಹೆಮ್ಮೆಪಡುವ ರೀತಿ ಬೆಳೆದು ನಿಂತಿದೆ. ಇಷ್ಟು ಗಟ್ಟಿಯಾಗಿ ಬೆಳೆಯಲಿಕ್ಕೆ ನಿರ್ದೇಶಕರು ಹಾಗೂ ನೌಕರುದಾರರ ಪಾತ್ರ ಬಹಳ ಮುಖ್ಯವಾಗಿದೆ. ಸಾರ್ವಜನಿಕರ ವಿಶ್ವಾಸಾರ್ಹತೆ ಬೆಳೆಸಿಕೊಂಡು ಸಹಕಾರಿ ಬ್ಯಾಂಕ್ ಇನ್ನು ಹೆಚ್ಚಿನ 2ನೇ ಪುಟಕ್ಕೆ...

## ಹಾವೇರಿಯಲ್ಲಿ ರಾಜ್ಯದ ಪಟ್ಟಣ ಸಹಕಾರ ಬ್ಯಾಂಕುಗಳ ಆಡಳಿತ ಮಂಡಳಿ ಸದಸ್ಯರು ಮತ್ತು ವೃತ್ತಿಪರ ನಿರ್ದೇಶಕರುಗಳಿಗೆ ಹಾಗೂ ಮುಖ್ಯಕಾರ್ಯನಿರ್ವಹಣಾಧಿಕಾರಿಗಳಿಗೆ ರಾಜ್ಯಮಟ್ಟದ ಒಂದು ದಿನದ ವಿಚಾರ ಸಂಕಿರಣ

**ಹಾವೇರಿ :** ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳವು ಪಟ್ಟಣ ಸಹಕಾರ ಬ್ಯಾಂಕುಗಳ ಆಡಳಿತ ಮಂಡಳಿ ಸದಸ್ಯರು ಮತ್ತು ವೃತ್ತಿಪರ ನಿರ್ದೇಶಕರುಗಳಿಗೆ ಹಾಗೂ ಮುಖ್ಯಕಾರ್ಯನಿರ್ವಹಣಾಧಿಕಾರಿಗಳಿಗೆ ದಿನಾಂಕ : 20.10.2024ರಂದು ಹಾವೇರಿಯಲ್ಲಿ ಏರ್ಪಡಿಸಿದ್ದ ರಾಜ್ಯಮಟ್ಟದ ಒಂದು ದಿನದ ವಿಚಾರ ಸಂಕಿರಣವನ್ನು ಮಹಾಮಂಡಳದ ಅಧ್ಯಕ್ಷರು ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಪ್ರವಾಸೋದ್ಯಮ ಸಚಿವರಾದ ಶ್ರೀ ಎಚ್.ಕೆ.



ಪಾಟೀಲರು ಉದ್ಘಾಟಿಸಿ ಮಾತನಾಡಿ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳವು ಇತ್ತೀಚಿನ ದಿನಗಳಲ್ಲಿ ಹೆಚ್ಚು ಕ್ರಿಯಾಶೀಲವಾಗಿದೆ. ಸಹಕಾರಿ ರಂಗದ ಅಧ್ಯಕ್ಷರು, ಉಪಾಧ್ಯಕ್ಷರು, ಸಿಇಒಗಳಿಗೆ ತಿಳುವಳಿಕೆ ನೀಡಲು ಹತ್ತು ಹಲವು ತರಬೇತಿ ಕಾರ್ಯಾಗಾರಗಳನ್ನು ಹಮ್ಮಿಕೊಳ್ಳುತ್ತಿದ್ದು, ಸಹಕಾರ ಕ್ಷೇತ್ರದ ಬಂಧುಗಳು 3ನೇ ಪುಟಕ್ಕೆ...

4 ಸರಕಾರಿ ನೌಕರರ ಸಹಕಾರಿ ಬ್ಯಾಂಕಿನ 116ನೇ ವಾರ್ಷಿಕ ಸರ್ವಸದಸ್ಯರ ಸಭೆ

5 ಶ್ರೀ ಗಣಪತಿ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಲಿ., ಸಾಗರ ರೂ. 316.96 ಲಕ್ಷ ಲಾಭ ಶೇ.11% ಷೇರು ಲಾಭಾಂಶ ಘೋಷಣೆ

7 ನಿಮ್ಮ ಪ್ರಶ್ನೆ – ನಮ್ಮ ಉತ್ತರ

ಸಂಪಾದಕೀಯ

## ಆತ್ಮೀಯ ಸಹಕಾರಿಗಳೇ...



# ಸವಾಲಿನ, ಧಾವಂತದ ಸುಳಿಯಲ್ಲಿ ಸಿಲುಕಿರುವ ಇಂದಿನ ಯುವಜನತೆ

ಇಂದಿನ ಯುವಜನತೆಯ ಬದುಕು ಸದಾ ಸವಾಲಿನ, ಧಾವಂತದ ಸುಳಿಯಲ್ಲಿ ಸಿಲುಕಿ ನರಳುತ್ತಿರುವುದನ್ನು ನೋಡಿದರೆ ಬೇಸರವಾಗುತ್ತದೆ. ಈ ಬಗೆಯ ಜೀವನಶೈಲಿಯಿಂದಾಗಿ ಅವರುಗಳ ಮಾನಸಿಕ ಆರೋಗ್ಯ ಹಳಿ ತಪ್ಪುತ್ತಿರುವಂತೆ ಕಾಣುತ್ತಿದೆ. ದಿನೇದಿನೇ ಈ ಸಮಸ್ಯೆ ಆರೋಗ್ಯ ಕ್ಷೇತ್ರಕ್ಕೆ ದೊಡ್ಡ ಸವಾಲಾಗಿ ಕಾಡುತ್ತಿದೆ. ಈ ಹಿನ್ನೆಲೆಯಲ್ಲಿ ಮಾನಸಿಕ ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸಲು ಪ್ರತಿವರ್ಷ ಜಾಗತಿಕ ಮಟ್ಟದಲ್ಲಿ ಮಾನಸಿಕ ಆರೋಗ್ಯ ದಿನವನ್ನು ಆಚರಿಸಲಾಗುತ್ತಿದೆ.

ಮೊದಲನೆಯದಾಗಿ, ಮಾನಸಿಕ ಆರೋಗ್ಯದ ಬಗ್ಗೆ ಬಹಿರಂಗವಾಗಿ ಚರ್ಚಿಸಲು, ಚಿಕಿತ್ಸೆ ಪಡೆಯಲು ಹಿಂಜರಿಯುವ ಪ್ರವೃತ್ತಿ ಇದೆ. ಮಾನಸಿಕ ಆರೋಗ್ಯದ ಬಗ್ಗೆ ಅರಿವು ಮೂಡಿಸುವ ಹಾಗೂ ಅದರ ಬಗ್ಗೆ ಮುಕ್ತವಾಗಿ ಚರ್ಚಿಸುವುದು ಇಂದು ಬಹು ಮುಖ್ಯವಾಗಿದೆ. ಕಲಿಕೆಯಲ್ಲಿ ಶ್ರೇಷ್ಠತೆಯನ್ನು ಸಾಧಿಸುವ, ಕೆಲಸದಲ್ಲಿ ಉತ್ತಮ ಗುರಿ ಮುಟ್ಟುವ, ವೃತ್ತಿಯಲ್ಲಿ ಉನ್ನತ ಸ್ಥಾನ ಪಡೆಯುವ ಒತ್ತಡಗಳು ಜನರನ್ನು ಮಾನಸಿಕವಾಗಿ, ದೈಹಿಕವಾಗಿ ಬಳಲುವಂತೆ ಮಾಡುತ್ತಿದೆ.

ಮೊದಲಿಗೆ ಇದು ವ್ಯಕ್ತಿಯ ಸಮಸ್ಯೆ ಎಂದು ಉಪೇಕ್ಷಿಸಿದರೇ, ಬೆಳೆದಂತೆ ಕುಟುಂಬದ ನಂತರ ಸಮಾಜದ ಸಮಸ್ಯೆಯಾಗಿ ಬಿಡುತ್ತದೆ. ಅದರಲ್ಲೂ ಯುವಜನತೆ ಈ ಬಗೆಯ ತಳಮಳದಿಂದ ಬಳಲುತ್ತಿರುವದು ಆತಂಕದ ವಿಷಯವಾಗಿದೆ. ಈ ವಯೋಮಾನದವರು ಮಾನಸಿಕ ಒತ್ತಡವನ್ನು ಹೇಗೆ ನಿರ್ವಹಿಸಬೇಕೆಂಬ ತರಬೇತಿಯನ್ನು ಪಡೆಯುವುದು ಅವಶ್ಯವಾಗಿದೆ. ಒತ್ತಡದ ನಿರ್ವಹಣೆಯನ್ನು ಕಲಿಯದಿದ್ದರೆ ಮುಂದಿನ ದಿನಗಳಲ್ಲಿ ಕೆಲಸ ಕಾರ್ಯಗಳನ್ನು ನಿರ್ವಹಿಸುವುದು ಅವರಿಗೆ ಕಷ್ಟಕರವಾಗಲಿದೆ. ಯಾವುದೇ ಬಗೆಯ ಒತ್ತಡದಿಂದ ಪಾರಾಗಲು ಮನೆ, ಕಚೇರಿಗಳಲ್ಲಿ ಕುಂಡಗಳಲ್ಲಿ ಹೂವಿನ ಗಿಡ ಬೆಳೆಸುವ ಹವ್ಯಾಸ ರೂಢಿಸಿಕೊಳ್ಳುವುದು, ಸಂಗೀತ, ಸಾಹಿತ್ಯ, ಕಲೆಗಳ ಇತ್ಯಾದಿ ವಿಷಯಗಳ ಬಗ್ಗೆ ಆಸಕ್ತಿ ಬೆಳಸಿ ಕೊಳ್ಳುವುದರಿಂದ ಎಲ್ಲ ಒತ್ತಡ, ಆತಂಕ ಮರೆಯಾಗಿ; ಮನಸ್ಸು ಉಲ್ಲಾಸಗೊಂಡು ಶಾಂತಚಿತ್ತತೆಯಿಂದ ಇರಲು ಸಾಧ್ಯವಾಗುತ್ತದೆ ಎನ್ನುತ್ತಾರೆ ಮನಶಾಸ್ತ್ರಜ್ಞರು.

ಇನ್ನೊಂದು, ನಿತ್ಯ ನಿಯಮಿತವಾಗಿ ವ್ಯಾಯಾಮ ಮಾಡುವುದು ಮಾನಸಿಕ ಒತ್ತಡದಿಂದ ಹೊರಬರಲು ಅತ್ಯುತ್ತಮ ಮಾರ್ಗವಾಗಿದೆ. ಇದರಿಂದ ರಕ್ತ ಪರಿಚಲನೆ ಸರಾಗವಾಗಿ, ದೇಹಕ್ಕೆ ನೆಮ್ಮದಿಯು ದೊರೆತು, ಮನಸ್ಸು ಉಲ್ಲಸಿತಗೊಳ್ಳುತ್ತದೆ. ಮುಂಜಾನೆಯ ವಾಯುವಿಹಾರ ಮನಸ್ಸನ್ನು ತಿಳಿಯಾಗಿಸಬಲ್ಲದು ಹಾಗೇ, ಮನಸ್ಸಿನ ಒತ್ತಡದಿಂದ ಹೊರಬರಲು ಯೋಗ ಸಹಕಾರಿಯಾಗಿದೆ. ಯೋಗದಿಂದ ಉಸಿರಾಟದ ಮೇಲೆ ನಿಯಂತ್ರಣ ಸಾಧಿಸಬಹುದಾಗಿದೆ. ಕೆಲ ನಿಮಿಷಗಳು ಧ್ಯಾನ ಮಾಡುವುದರಿಂದ ರಕ್ತ ಪರಿಚಲನೆ ಸರಾಗವಾಗಿ ದೈಹಿಕ, ಮಾನಸಿಕ ನೋವು ನಿವಾರಣೆಯಾಗಿ ಮನಸ್ಸು ಉಲ್ಲಾಸಿತವಾಗುತ್ತದೆ.

ಇದೆಲ್ಲ ದೈಹಿಕ, ಮಾನಸಿಕ ವಿಚಾರವಾದರೇ, ನಾವು ಸೇವಿಸುವ ಆಹಾರದಲ್ಲಿ ತಾಜಾ ಹಣ್ಣು ತರಕಾರಿ, ಸೊಪ್ಪುಗಳನ್ನು ಸೇವಿಸುವ ಅಭ್ಯಾಸ ರೂಢಿಸಿಕೊಂಡಲ್ಲಿ ನಮ್ಮ ಶರೀರ ತನಗೇ ತಾನೇ ಆರೋಗ್ಯದಿಂದ ಉಲ್ಲಾಸಗೊಳುತ್ತದೆ. ಹೀಗೆ ಮನಸ್ಸಿನ ಒತ್ತಡ ನಿವಾರಣೆಗೆ ಹಲವು ದಾರಿಗಳಿವೆ. ನಾವು ಇವುಗಳಲ್ಲಿ ಕೆಲವನ್ನಾದರೂ ಜೀವನದಲ್ಲಿ ಅಳವಡಿಸಿಕೊಂಡು ಒತ್ತಡದಿಂದ ಪಾರಾಗಿ ಉಲ್ಲಾಸದಿಂದ ಬದುಕು ನಿರ್ವಹಿಸಿ ಎಂದು ಯುವಜನತೆಗೆ ಹೇಳ ಬಯಸುತ್ತೇನೆ.

▸▸ ಎಚ್.ಕೆ. ಪಾಟೀಲ

...1ನೇ ಪುಟದಿಂದ

ಮಟ್ಟದಲ್ಲಿ ಬೆಳೆಯಬೇಕು ಎಂದರು. ಬ್ಯಾಂಕ್‌ಗಳು ಸಾಲ ಕೊಡುತ್ತವೆ. ಸಾಲ ವಸೂಲಿ ಮಾಡುತ್ತವೆ. ಆದರೆ ಉದ್ಯೋಗ ಸೃಷ್ಟಿಸಲು ಆಗುತ್ತಿಲ್ಲ. ಉದ್ಯೋಗ ಸೃಷ್ಟಿಗೆ ಸಾಲ ಕೇಳಿದರೆ ಬಹಳ ವಿಚಾರ ಮಾಡುತ್ತೇವೆ. ಹಾಗಾಗಿ ಪ್ರತಿ ತಿಂಗಳು ನಡೆಯುವ ಮೀಟಿಂಗ್‌ನಲ್ಲಿ ಉದ್ಯೋಗ ಸೃಷ್ಟಿ ಮಾಡಿಸುವ ಕುರಿತು ಚರ್ಚೆಯಾಗಬೇಕು. ಉದ್ಯೋಗ ಸೃಷ್ಟಿಗೆ ಹೆಚ್ಚು ಆದ್ಯತೆ ನೀಡಿದರೆ, ಸಮಾಜದಲ್ಲಿ ಶಾಂತಿ, ಸೌಹಾರ್ದತೆ ಬೆಳೆಯುತ್ತದೆ ಎಂದರು.

ಬ್ಯಾಂಕಿನ ಅಧ್ಯಕ್ಷೆ ಶ್ರೀಮತಿ ದಾಕ್ಷಾಯಣಿ ಬಿ. ಗಾಣಿಗೇರ ಮಾತನಾಡಿ ಹಾವೇರಿಗೆ ಸೊಸೆಯಂದಿರಾಗಿ ಬಂದಿದ್ದ ಮಹಿಳೆಯರು ಸೇರಿಕೊಂಡು ಲೇಡಿಸ್ ಕ್ಲಬ್ ಕಟ್ಟಿದ್ದೆವು. ಸಮಾಜಕ್ಕಾಗಿ ಏನಾದರೂ ಮಾಡಬೇಕೆಂಬ ಚಿಂತನೆಯೊಂದಿಗೆ ಈ ಸಹಕಾರ ಬ್ಯಾಂಕ್ ಆರಂಭಿಸಿದೆವು. ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದಿಂದ ಮಾನ್ಯತೆ ಪಡೆದಿರುವ ಜಿಲ್ಲೆಯ ಏಕೈಕ ಮಹಿಳಾ ಸಹಕಾರ ಬ್ಯಾಂಕ್ ಇದಾಗಿದೆ ಎಂದರು.

ಬ್ಯಾಂಕ್ ಸ್ಥಾಪನೆ ಹಾಗೂ ಬೆಳವಣಿಗೆಯಲ್ಲಿ ಮಹತ್ವದ ಪಾತ್ರ ವಹಿಸಿದ್ದ ಸಂಸ್ಥಾಪಕ ನಿರ್ದೇಶಕರನ್ನು ಸನ್ಮಾನಿಸಿ ಗೌರವಿಸಲಾಯಿತು. ದಿವ್ಯ ಸಾನಿಧ್ಯ ವಹಿಸಿದ್ದ ಹುಕ್ಕೇರಿ ಮಠದ ಪರಮಪೂಜ್ಯ ಶ್ರೀ ಮ.ನಿ.ಪ್ರ. ಸದಾಶಿವ ಮಹಾಸ್ವಾಮಿಗಳು ಆಶೀರ್ವಚನ ನೀಡಿದರು.

ಆದಾಯ ತೆರಿಗೆ ಇಲಾಖೆಯ ಹೆಚ್ಚುವರಿ ಆಯುಕ್ತೆ ಶ್ರೀಮತಿ ಪ್ರಿಯದರ್ಶಿನಿ ಎಲ್. ಬಸೇಗಣ್ಣಿ, ದಂತ ವೈದ್ಯೆ ಡಾ. ಕಲ್ಪನಾ ಎಂ.ಎಸ್., ಮಹಾಮಂಡಳದ ನಿರ್ದೇಶಕರಾದ ಶ್ರೀಮತಿ ವೀರಮ್ಮ ಪಿ., ಮಹಾಮಂಡಳದ ಶಿಕ್ಷಣ ನಿಧಿ ಸಲಹಾ ಸಮಿತಿ ಸದಸ್ಯರಾದ ಶ್ರೀ ಷಣ್ಮುಖಪ್ಪ ಮುಚ್ಚಂಡಿ, ಮಹಾಮಂಡಳದ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಪುಂಡಲೀಕ ಎನ್. ಕೇರೂರೆ, ಬ್ಯಾಂಕಿಂಗ್ ಸಲಹೆಗಾರರಾದ ಶ್ರೀ ಸುಧಾಕರ ಭಟ್, ಕೊಟ್ರೇಶಪ್ಪ ಬಸೇಗಣ್ಣಿ, ಬ್ಯಾಂಕಿನ ಉಪಾಧ್ಯಕ್ಷೆ ಶ್ರೀಮತಿ ವಿಮಲ್ ಎಸ್. ಹಿಂಚಿಗೇರಿ, ಬ್ಯಾಂಕಿನ ನಿರ್ದೇಶಕರುಗಳಾದ ಶ್ರೀಮತಿ ರತ್ನವ್ವ ಜಿ. ಹೇರೂರ, ಶ್ರೀಮತಿ ಯಶೋಧಾ ಎಂ. ಮಾಸೂರ, ಶ್ರೀಮತಿ ರತ್ನಾ ಸಿ. ಅಂಗಡಿ, ಶ್ರೀಮತಿ ನೇತ್ರಾವತಿ ಎಸ್. ಮೇಳದವರ, ಶ್ರೀಮತಿ ಅಂಜನಾ ಎಸ್. ಕುಂಠೆ, ಶ್ರೀಮತಿ ಲೀಲಾ ಎ. ಗಡಾದ, ಶ್ರೀಮತಿ ಸುಧಾ ಎಚ್. ಅನೂರಶೆಟ್ಟು, ಶ್ರೀಮತಿ ಪ್ರವೀಣಾ ಎಂ. ಕೋರಿಶೆಟ್ಟರ, ಶ್ರೀಮತಿ ಹೇಮಲತಾ ಪಿ. ಕರ್ಜಗಿ, ಶ್ರೀಮತಿ ಶೈಲಾ ಜೆ. ಬಸೇಗಣ್ಣಿ, ಶ್ರೀಮತಿ ಪಾರ್ವತಿ ಪಿ. ಭಾವನೂರ ವೃತ್ತಿಪರ ನಿರ್ದೇಶಕರಾದ ಶ್ರೀ ಬಸವರಾಜ ಆರ್. ಚಿಕ್ಕಮಠ, ಶ್ರೀಮತಿ ಕವಿತಾ ಕಿತ್ತೂರ, ಬ್ಯಾಂಕಿನ ವ್ಯವಸ್ಥಾಪಕ ಶ್ರೀ ಎನ್.ಜಿ. ರಟ್ಟಿಹಳ್ಳಿ ಇದ್ದರು.

# ರಡ್ಡಿ ಸಹಕಾರ ಬ್ಯಾಂಕಿನ ಶತಮಾನೋತ್ಸವ ಸಮಾರಂಭದ ಛಾಯಾಚಿತ್ರಗಳು



ರಡ್ಡಿ ಸಹಕಾರ ಬ್ಯಾಂಕಿನ ಶತಮಾನೋತ್ಸವ ಪ್ರಯುಕ್ತ ಸ್ಮರಣ ಸಂಚಿಕೆ ಬಿಡುಗಡೆ



"ಕೆ.ಎಚ್. ಪಾಟೀಲರ ವಿಚಾರಧಾರೆ" ಪುಸ್ತಕ ಬಿಡುಗಡೆ



ರಡ್ಡಿ ಸಹಕಾರ ಬ್ಯಾಂಕಿನ ಸಂಸ್ಥಾಪಕರಾದ ಎಫ್.ಟಿ. ನಲವಡಿ ಮತ್ತು ಸಹಕಾರ ರಂಗದ ಭೀಷ್ಮ ಕೆ.ಎಚ್. ಪಾಟೀಲ ಅವರ ಪುತ್ಥಳಿಗಳ ಅನಾವರಣ



ಮಹಾಸಾಧ್ವಿ ಹೇಮರಡ್ಡಿ ಮಲ್ಲಮ್ಮ ಇವರ ಭಾವಚಿತ್ರ ಅನಾವರಣ

...1ನೇ ಪುಟದಿಂದ

ಇದರ ಸದ್ಬಳಕೆ ಮಾಡಿಕೊಳ್ಳಬೇಕೆಂದರು. ಕೇಂದ್ರ ಸರ್ಕಾರ ಹಾಗೂ ರಿಸರ್ವ್ ಬ್ಯಾಂಕು ಅರ್ಬನ್ ಬ್ಯಾಂಕುಗಳನ್ನು ಮುಚ್ಚಿಸುವ ಹುನ್ನಾರ ನಡೆಸಿದ್ದವು. ಸಣ್ಣ ಸಣ್ಣ ಬ್ಯಾಂಕುಗಳು ಜನರಿಗೆ ಸರಿಯಾಗಿ ಸೇವೆ ಒದಗಿಸುತ್ತಿವೆ. ಬದಲಾದ ಕಾಲಘಟ್ಟದಲ್ಲಿ ರಿಸರ್ವ್ ಬ್ಯಾಂಕ್ ಅರ್ಬನ್ ಬ್ಯಾಂಕುಗಳ ಬೆಳವಣಿಗೆಗೆ ಅವಕಾಶ ನೀಡಿದೆ. ಹೆಚ್ಚು ಬ್ಯಾಂಕ್ ಸ್ಥಾಪಿಸಲು ಅವಕಾಶ ಕಲ್ಪಿಸಿಕೊಟ್ಟಿದ್ದಾರೆ. ಅವುಗಳ ಅವಕಾಶ ಸದ್ಬಳಕೆ ಮಾಡಿಕೊಳ್ಳುವ ಕೆಲಸ ಮಾಡೋಣ. ಕಾಲಕಾಲಕ್ಕೆ ಆಯೋಜಿಸುವ ತರಬೇತಿ ಮತ್ತು ಕಾರ್ಯಾಗಾರಗಳ ಸದುಪಯೋಗ ಪಡೆದುಕೊಂಡು ಸಹಕಾರಿ ರಂಗ ಗಟ್ಟಿಗೊಳಿಸಬೇಕೆಂದು ತಿಳಿಸಿದರು.

ಈ ವಿಚಾರ ಸಂಕಿರಣದಲ್ಲಿ ಪಟ್ಟಣ ಸಹಕಾರ ಬ್ಯಾಂಕುಗಳ ಆಡಳಿತ ಮಂಡಳಿಯ ಮತ್ತು ವೃತ್ತಿಪರ ನಿರ್ದೇಶಕರುಗಳ ಜವಾಬ್ದಾರಿ ಹಾಗೂ ಕರ್ತವ್ಯಗಳು, ಪಟ್ಟಣ ಸಹಕಾರ ಬ್ಯಾಂಕುಗಳಲ್ಲಿ ಸಾಲ ಮತ್ತು ಮುಂಗಡಗಳು ವಿಷಯಗಳ ಕುರಿತು ಬ್ಯಾಂಕಿಂಗ್ ತಜ್ಞರಾದ ಶ್ರೀ ಕೆ. ಗಣೇಶ ರವರು, ಭಾರತೀಯ ರಿಜರ್ವ್ ಬ್ಯಾಂಕಿನ ಇತ್ತೀಚಿನ ಸುತ್ತೋಲೆಗಳು / ಮಾರ್ಗಸೂಚಿಗಳು ವಿಷಯ ಕುರಿತು ಬ್ಯಾಂಕಿಂಗ್ ಸಲಹೆಗಾರರಾದ ಶ್ರೀ ಸುಧಾಕರ ಭಟ್ ರವರು ಉಪನ್ಯಾಸ ನೀಡಿದರು.

ಕೆಸಿಸಿ ಬ್ಯಾಂಕ್ ನಿರ್ದೇಶಕರಾದ ಕೊಟ್ರೇಶಪ್ಪ ಬಸೇಗಣ್ಣಿ, ಮಹಾಮಂಡಳದ ನಿರ್ದೇಶಕರಾದ ಶ್ರೀಮತಿ ವೀರಮ್ಮ ಪಿ., ಮಹಾಮಂಡಳದ ಶಿಕ್ಷಣ ನಿಧಿ ಸಲಹಾ ಸಮಿತಿ ಸದಸ್ಯರಾದ ಶ್ರೀ ಷಣ್ಮುಖಪ್ಪ ಮುಚ್ಚಂಡಿ, ಪ್ರಿಯದರ್ಶಿನಿ ಮಹಿಳಾ ಅರ್ಬನ್ ಸಹಕಾರಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀಮತಿ ದಾಕ್ಷಾಯಣಿ ಬಿ. ಗಾಣಿಗೇರ, ಹಾವೇರಿ ಅರ್ಬನ್ ಕೋ-ಆಪರೇಟಿವ್ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಜಿ.ಎಸ್. ಮಾಗಾವಿ, ರಾಣೆಬೆನ್ನೂರು ಶ್ರೀ ಬಸವೇಶ್ವರ ಅರ್ಬನ್ ಕೋ-ಆಪರೇಟಿವ್ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಪಿ.ಎಮ್. ಗೌಳಿ, ಸವಣೂರು ಅರ್ಬನ್ ಕೋ-ಆಪರೇಟಿವ್ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಚನ್ನಪ್ಪ ಜಿ. ನಾರಾಯಣಪುರ, ಶಿಗ್ಗಾಂವ ಅರ್ಬನ್ ಕೋ-ಆಪರೇಟಿವ್ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಜಗದೀಶ್ ಸಿ. ತೊಂಡಿಹಾಳ, ಹಾವೇರಿಯ ಕಾರ್ಡಮಮ್ ಮರ್ಚೆಂಟ್ಸ್ ಕೋ-ಆಪರೇಟಿವ್ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಗಂಗಾಧರ ಬಿ. ಮಾಳಗಿ, ರಾಣೆಬೆನ್ನೂರು ಶ್ರೀ ಸಿದ್ದೇಶ್ವರ ಕೋ-ಆಪರೇಟಿವ್ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಎಮ್.ಎಸ್.ಅರಕೇರಿ, ಬ್ಯಾಡಗಿ ಗಜಾನನ ಅರ್ಬನ್ ಕೋ-ಆಪರೇಟಿವ್ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಎಸ್.ಬಿ.ಪಾಟೀಲ ರವರುಗಳು ಉಪಸ್ಥಿತರಿದ್ದರು.

ಪ್ರಾರಂಭದಲ್ಲಿ ವಿಚಾರ ಸಂಕಿರಣಕ್ಕೆ ಆಗಮಿಸಿದ್ದ ಪಟ್ಟಣ ಸಹಕಾರ ಬ್ಯಾಂಕುಗಳ ಪ್ರತಿನಿಧಿಗಳನ್ನು ಹಾಗೂ ಗಣ್ಯರನ್ನು ಮಹಾಮಂಡಳದ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಪುಂಡಲೀಕ ಎನ್. ಕೇರೂರೆ ಯವರು ಸ್ವಾಗತಿಸಿ, ಕೊನೆಯಲ್ಲಿ ವಂದನಾರ್ಪಣೆ ಸಲ್ಲಿಸಿದರು. ಈ ವಿಚಾರ ಸಂಕಿರಣದಲ್ಲಿ ರಾಜ್ಯದ ಪಟ್ಟಣ ಸಹಕಾರ ಬ್ಯಾಂಕುಗಳಿಂದ ಸುಮಾರು 130ಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಿ, ವಿಚಾರ ಸಂಕಿರಣದ ಸದುಪಯೋಗವನ್ನು ಪಡೆದುಕೊಂಡರು.

# ಸರಕಾರಿ ನೌಕರರ ಸಹಕಾರಿ ಬ್ಯಾಂಕಿನ 116ನೇ ವಾರ್ಷಿಕ ಸರ್ವಸದಸ್ಯರ ಸಭೆ



**ವಿಜಯಪುರ :** ಸರಕಾರಿ ನೌಕರರ ಸಹಕಾರಿ ಬ್ಯಾಂಕಿನ ಸನ್ 2023–24ನೇ ಸಾಲಿನ 116ನೇ ಸರ್ವ ಸಾಧಾರಣ ಸಭೆಯನ್ನು ದಿನಾಂಕ : 15/09/2024 ರವಿವಾರ ಮುಂಜಾನೆ 10.00 ಗಂಟೆಗೆ ನಗರದ ಸಂಗನಬಸವ ಮಂಗಲ ಕಾರ್ಯಾಲಯ, ಲಿಂಗದಗುಡಿರೋಡ, ವಿಜಯಪುರದಲ್ಲಿ ಜರುಗಿತು.

ಬ್ಯಾಂಕಿನ ನಿರ್ದೇಶಕರಾದ ಶ್ರೀ ಹಣಮಂತ ಬಿ ಕೊಣದಿ ಸರ್ವ ಸದಸ್ಯರನ್ನು ಸ್ವಾಗತಿಸಿದರು, ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಅರ್ಜುನ ಗಂಗು ಲಮಾಣಿ ಇವರು ಸನ್ 2023–24ನೇ ಸಾಲಿನ ವರದಿಯಲ್ಲಿ ಬ್ಯಾಂಕು ರೂ. 1.75 ಕೋಟಿ ಲಾಭ ಗಳಿಸಿದೆ ಅಲ್ಲದೇ ನಮ್ಮ ಬ್ಯಾಂಕು ರಾಷ್ಟ್ರೀಕೃತ ಬ್ಯಾಂಕಿಗೆ ಸರಿಸಮನಾಗಿ ಆಧುನಿಕ ಬ್ಯಾಂಕಿಂಗ್ ತಂತ್ರಜ್ಞಾನದೊಂದಿಗೆ ಸಂಪೂರ್ಣ ಗಣಕಿಕೃತವಾಗಿದ್ದು ಬ್ಯಾಂಕಿನ ಎಲ್ಲ ಶಾಖೆಗಳಿಗೆ ಕೋರ್ ಬ್ಯಾಂಕಿಂಗ್ ತಂತ್ರಜ್ಞಾನ ಅಳವಡಿಸಲಾಗಿದೆ.

ಯು.ಪಿ.ಆಯ್ ಸೌಲಭ್ಯಗಳಾದ ಪೋನ್ ಪೇ, ಗೂಗಲ್ ಪೇ, ಮೋಬೈಲ್ ಬ್ಯಾಂಕಿಂಗ್ ಮತ್ತು ಎ.ಟಿ.ಎಮ್ ಆಧುನಿಕ ತಂತ್ರಜ್ಞಾನದ ಎಲ್ಲ ಸೌಲಭ್ಯಗಳನ್ನು ಅಳವಡಿಸಿಕೊಂಡು ಗ್ರಾಹಕ ಸ್ನೇಹಿ ಸೇವೆ ನೀಡುತ್ತಿದೆ ಮತ್ತು 2023–24ನೇ ಸಾಲಿನಲ್ಲಿ ರೂ.426 ಕೋಟಿ ಠೇವಣಿ ಹಾಗೂ ರೂ.483 ಕೋಟಿ ದುಡಿಯುವ ಬಂಡವಾಳ ಹೊಂದಿದ್ದು ಸುಮಾರು 20,000 ಸದಸ್ಯರಿಗೆ ಸುಲಭ ರೀತಿಯಲ್ಲಿ ಸಾಲ ಸೌಲಭ್ಯಗಳನ್ನು ವಿತರಿಸಿದೆ. ಹಿರಿಯ ನಾಗರಿಕರಿಗೆ, ಸೈನಿಕರಿಗೆ ಹಾಗೂ ಮಾಜಿ ಸೈನಿಕರಿಗೆ 0.50% ಹೆಚ್ಚಿನ ಬಡ್ಡಿದರದ ಸೌಲಭ್ಯ ಒದಗಿಸಲಾಗುತ್ತಿದೆ. “ಅ” ವರ್ಗದ ಅಡಿಟ್ ವರ್ಗಿಕರಣ ಇದ್ದು, ಗ್ರಾಸ್ ಎನ್.ಪಿ.ಎ 6.60% ಇದೆ. 2023–24ನೇ ಸಾಲಿನಲ್ಲಿ ಒಟ್ಟು ನಿವ್ವಳ ಲಾಭ ರೂ. 1.75 ಕೋಟಿಗಳಿಸಿ ಗ್ರಾಹಕರ ವಿಶ್ವಾಸಕ್ಕೆ ಪಾತ್ರವಾಗಿದೆ ಎಂದು ತಿಳಿಸಿದರು. ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕರಾದ ಶ್ರೀಮತಿ ಎಮ್ ವಿ ಪರ್ವತಿ ಇವರು ದಿನಾಂಕ : 17/09/2023 ರಂದು ಜರುಗಿದ ಬ್ಯಾಂಕಿನ 115ನೇ ವಾರ್ಷಿಕ ಸರ್ವಸಧಾರಣ ಸಭೆಯ ನಡುವಳಿಕೆಗಳನ್ನು ಓದಿ ಹೇಳಿದರು.

ಎಸ್.ಎಸ್.ಎಲ್.ಸಿ ಮತ್ತು ಪಿ.ಯು.ಸಿ.ಯಲ್ಲಿ ಗರಿಷ್ಠ ಅಂಕ ಪಡೆದ 60 ಪ್ರತಿಭಾವಂತ ಸದಸ್ಯರ ಮಕ್ಕಳಿಗೆ ಆಡಳಿತ ಮಂಡಳಿಯ ಸದಸ್ಯರು ಪ್ರತಿಭಾ ಪುರಸ್ಕಾರ ಪ್ರಶಸ್ತಿಯನ್ನು ನೀಡಿ ಸನ್ಮಾನಿಸಿದರು.

ಈ ಬ್ಯಾಂಕಿನ ಸಮಾರಂಭದಲ್ಲಿ ಬ್ಯಾಂಕಿನ ಉಪಾಧ್ಯಕ್ಷರಾದ ಶ್ರೀ ಅಶೋಕ ಚನಬಸಗೋಳ, ನಿರ್ದೇಶಕರಾದ ಶ್ರೀ ಅರವಿಂದ ಭೋ ಹೂಗಾರ, ಶ್ರೀ ಆಯ್.ಎ. ತೇಲಿ, ಶ್ರೀ ಬಿ.ಎಮ್. ಬಿರಾದಾರ, ಶ್ರೀ ಸುರೇಶ ಶಡಶ್ಯಾಳ, ಶ್ರೀ ಹಣಮಂತ ಬಿ ಕೊಣದಿ, ಶ್ರೀ ಪ್ರಶಾಂತ ಎಸ್. ಚನಗೊಂಡ, ಶ್ರೀಮತಿ ಜಯಶ್ರೀ ಬೆಣ್ಣಿ, ಶ್ರೀ ಸದಾಶಿವ ದಳವಾಯಿ, ಶ್ರೀ ಆನಂದಗೌಡ ಎನ್. ಬಿರಾದಾರ, ಶ್ರೀ ಎ.ಎಮ್. ವಾಲೀಕಾರ ಶ್ರೀ ಉಮೇಶ ಗುಡ್ನಾಳ, ಶ್ರೀಮತಿ ನೀಲಾ ಇಂಗಳೆ, ಶ್ರೀ ಸಿ.ಟಿ. ಜಿತ್ತಿ, ಪ್ರಧಾನ ವ್ಯವಸ್ಥಾಪಕರಾದ ಶ್ರೀಮತಿ ಎಮ್.ವಿ. ಪರ್ವತಿ, ವ್ಯವಸ್ಥಾಪಕರಾದ ಶ್ರೀ ಎಮ್.ಕೆ. ಜೋಶಿ, ಬ್ಯಾಂಕಿನ ಸದಸ್ಯರುಗಳು ಹಾಗೂ ಸಿಬ್ಬಂದಿಯವರು ಉಪಸ್ಥಿತರಿದ್ದರು.

## ಸಹಕಾರ ಶಿಕ್ಷಣ ನಿಧಿ ಸಲ್ಲಿಕೆ



ದಿ ಬೆಂಗಳೂರು ಸಿಟಿ ಕೋ–ಆಪರೇಟಿವ್ ಬ್ಯಾಂಕಿನ ಸಹಕಾರ ಶಿಕ್ಷಣ ನಿಧಿ ಚೆಕ್‌ನ್ನು ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಆವಲಹಳ್ಳಿ ಚಂದ್ರಪ್ಪ ಆರ್., ರವರು ಮಹಾಮಂಡಳದ ಅಧ್ಯಕ್ಷರಾದ ಶ್ರೀ ಎಚ್.ಕೆ. ಪಾಟೀಲರವರಿಗೆ ಸಲ್ಲಿಸಿದರು. ಈ ಸಂದರ್ಭದಲ್ಲಿ ಮಹಾಮಂಡಳದ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಪುಂಡಲೀಕ ಎನ್. ಕೇರೂರೆ ಹಾಗೂ ಬ್ಯಾಂಕಿನ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಮಂಜುನಾಥ ಪಿ.ರವರು ಉಪಸ್ಥಿತರಿದ್ದರು.



ತುಮಕೂರು ವೈಶ್ಯ ಕೋ–ಆಪರೇಟಿವ್ ಬ್ಯಾಂಕಿನ ಸಹಕಾರ ಶಿಕ್ಷಣ ನಿಧಿ ಚೆಕ್‌ನ್ನು ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಕೆ.ಎನ್. ಗೋವಿಂದರಾಜು ಹಾಗೂ ಉಪಾಧ್ಯಕ್ಷರಾದ ಕೆ.ಎಸ್. ರಾಮಮೂರ್ತಿ ರವರುಗಳು ಮಹಾಮಂಡಳದ ಅಧ್ಯಕ್ಷರಾದ ಶ್ರೀ ಎಚ್.ಕೆ. ಪಾಟೀಲರವರಿಗೆ ಸಲ್ಲಿಸಿದರು. ಮಹಾಮಂಡಳದ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಪುಂಡಲೀಕ ಎನ್. ಕೇರೂರೆ ಹಾಗೂ ಬ್ಯಾಂಕಿನ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀಮತಿ ಎಸ್. ಸುಮ ಮತ್ತು ಬ್ಯಾಂಕಿನ ಸಿಬ್ಬಂದಿ ಶ್ರೀ ಕೆ.ಪಿ.ಲಕ್ಷ್ಮೀಕಾಂತರಾಜ್ ಅರಸ್ ರವರು ಉಪಸ್ಥಿತರಿದ್ದರು.

# ಶ್ರೀ ಗಣಪತಿ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಲಿ., ಸಾಗರ

## ರೂ. 316.96 ಲಕ್ಷ ಲಾಭ ಶೇ.11% ಷೇರು ಲಾಭಾಂಶ ಘೋಷಣೆ






**ಸಾಗರ :** ಶ್ರೀ ಗಣಪತಿ ಅರ್ಬನ್ ಕೋ–ಆಪರೇಟಿವ್ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ನಾರಾಯಣರವರು ಬ್ಯಾಂಕಿನ 2023–24ನೇ ಸಾಲಿನ 109ನೇ ವಾರ್ಷಿಕ ಸರ್ವ ಸದಸ್ಯರ ಸಭೆಯಲ್ಲಿ ಮಾತನಾಡುತ್ತಾ ನಮ್ಮ ಬ್ಯಾಂಕು ಸಹಕಾರಿ ತತ್ವವನ್ನು ಬಹಳ ಹಿಂದಿನಿಂದಲೂ ಅತ್ಯಂತ ಅಚ್ಚುಕಟ್ಟಾಗಿ ವಸ್ತುಶಃ ಜಾರಿಗೆ ತಂದಿದ್ದು ಭಾರತೀಯ ರಿಸರ್ವ್ ಬ್ಯಾಂಕ್ ಮತ್ತು ಇಲಾಖೆಯ ಮಾರ್ಗದರ್ಶನಗಳಿಗನುಸಾರವಾಗಿ ಹಾಗೂ ಬ್ಯಾಂಕಿನ ಸದಸ್ಯರ ಹಾಗೂ ಗ್ರಾಹಕರ ಸಲಹೆಗಳಿಗನುಸಾರವಾಗಿ ಬ್ಯಾಂಕು ಆರ್ಥಿಕವಾಗಿ ಹಿಂದುಳಿದವರಿಗೆ, ದುರ್ಬಲ ವರ್ಗದವರಿಗೆ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಸಣ್ಣ ಪ್ರಮಾಣದ ಕೈಗಾರಿಕೆ, ಗೃಹ ಕೈಗಾರಿಕೆ, ವ್ಯಾಪಾರ ಉದ್ಯಮಗಳಿಗೆ ಸಾಲ ನೀಡುವುದು, ಸಣ್ಣ ವ್ಯಾಪಾರ ವ್ಯವಹಾರಕ್ಕಾಗಿ ಸಾಲ ನೀಡುವುದು ಇನ್ನಿತರೆ ಸಾಲಗಳನ್ನು ತ್ವರಿತವಾಗಿ ನೀಡುತ್ತಿದ್ದು ಸದಸ್ಯರ ಅವಶ್ಯಕತೆಗಳಿಗನುಸಾರವಾಗಿ ಸಾಲ ಕೊಡುವುದು ಮತ್ತು ಸಾರ್ವಜನಿಕರಿಂದ ಠೇವಣಿ ಸಂಗ್ರಹಿಸಲಾಗುತ್ತಿದೆ ಎಂದರು.

ನಮ್ಮ ಬ್ಯಾಂಕು ಈಗಾಗಲೇ ಎಟಿಎಮ್, ಐಎಮ್‌ಪಿಎಸ್, ಆರ್‌ಟಿಜಿಎಸ್/ಎನ್‌ಈಎಫ್‌ಟಿ, ಎಸ್.ಎಮ್.ಎಸ್ ಸೌಲಭ್ಯ, ಮೊಬೈಲ್ ಬ್ಯಾಂಕಿಂಗ್ ಸೌಲಭ್ಯ ಮತ್ತು ಇ.ಕಾಂ ಗಳನ್ನು ಜಾರಿಗೊಳಿಸಿದ್ದು ಇತ್ತೀಚೆಗೆ UPI (Phonepay, Gpay, Whatsup pay, BHIM) ಸೌಲಭ್ಯವನ್ನು ಜಾರಿಗೊಳಿಸಿದ್ದು ಸಹ ನಮ್ಮ ಬ್ಯಾಂಕಿನ ಹಿರಿಮೆ ಎಂದು ತಿಳಿಸಲು ಹರ್ಷಿಸುತ್ತೇವೆ. ಯಾವುದೇ ರಾಷ್ಟ್ರೀಕೃತ ಬ್ಯಾಂಕಿಗೆ ಕಡಿಮೆ ಇಲ್ಲದಂತೆ ದೇಶದ ಯಾವುದೇ ಮೂಲೆಯಿಂದಲೂ ಸಹ ನಮ್ಮ ಗ್ರಾಹಕರು ಮೇಲ್ಕಂಡ ಎಲ್ಲಾ ಸೌಲಭ್ಯಗಳನ್ನು ಉಪಯೋಗಿಸಿ ಯಾವುದೇ ಅಡಚಣೆಯಿಲ್ಲದೆ 24x7 ವ್ಯವಹಾರವನ್ನು ಮಾಡಬಹುದಾಗಿರುತ್ತದೆ ಎಂದು ತಿಳಿಸಲು ಹರ್ಷಿಸುತ್ತೇವೆ. ಆದ್ದರಿಂದ ಗ್ರಾಹಕರು ಕೂಡಲೇ ಬ್ಯಾಂಕಿನಿಂದ ನೀಡುತ್ತಿರುವ ಮೇಲ್ಕಂಡ ಸೌಲಭ್ಯವನ್ನು ಉಪಯೋಗಿಸಿಕೊಂಡು ವ್ಯವಹರಿಸಲು ಕೋರಿದರು.

# ಕರ್ನಾಟಕ ಸಹಕಾರ ಸಂಘಗಳ ಮತ್ತು ಬ್ಯಾಂಕುಗಳ ಸಾಲ ವಸೂಲಾತಿ ಕ್ರಮಗಳ ಕೈಪಿಡಿ

## (ದಾವಾ ಹೂಡುವ ಕ್ರಮ, ಅಮಲ್ಜಾರಿ ಕ್ರಮಗಳು ಮತ್ತು ಸಂಬಂಧಿಸಿದ ಎಲ್ಲಾ ಮಾದರಿ ನಮೂನೆಗಳ ಸಹಿತ)

**ಕೃಷ್ಣ ವಿ. ಗರಡೀಮನಿ,** ಸಹಾಯಕ ಪ್ರಧಾನ ವ್ಯವಸ್ಥಾಪಕರು/ಮಾರಾಟಾಧಿಕಾರಿಗಳು,
ಮಹಿಳಾ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್., ಸೌತ್ ಎಂಡ್ ರಸ್ತೆ, ಶೇಷಾದ್ರಿಪುರಂ, ಬೆಂಗಳೂರು-20 (9880453464)

...ಹಿಂದಿನ ಸಂಚಿಕೆಯಿಂದ

**ಅಮಲ್ಜಾರಿ ಕ್ರಮಗಳು / ಅಮಲ್‌ಬಜಾವಣೆ (Execution of Co-operative decrees)**

**ಅನುಬಂಧಗಳು- ಭಾಗ-2**

**ಅಮಲ್ಜಾರಿಗೆ ಸಂಬಂಧಿಸಿದ ನಮೂನೆಗಳು**

ಅಮಲ್ಜಾರಿ ಅರ್ಜಿ ಮುಖ ಪತ್ರ

(FACING SHEET OF EXECUTION PETITION)

ಕಛೇರಿ ಟಿಪ್ಪಣಿ

ಸಿ.ಇ.ಪಿ.ಸಂಖ್ಯೆ:

ಅಂಗೀಕರಿಸಿದ ದಿನಾಂಕ:

ಇ.ಪಿ. ಸ್ವೀಕೃತವಾದ ದಿನಾಂಕ:

1. ವಾದಿ ಸಂಘದ/ಬ್ಯಾಂಕಿನ ಹೆಸರು ಮತ್ತು ಸಂಖ್ಯೆ :
2. ತಾಲ್ಲೂಕು ಮತ್ತು ಪಂಚ ತರಾವಿನ (ಅವಾರ್ಡ್) : ದಿನಾಂಕ
3. ಯೂನಿಯನ್ ಮತ್ತು ಸಂಖ್ಯೆ :
4. ಸಾಲಗಾರರ (ಜಡ್ಜಮೆಂಟ್ ಡೆಟಾರ್ಸ್) ಹೆಸರು ಮತ್ತು ಅವರ ನಿವಾಸದ ವಿಳಾಸಗಳು : 1.
   2.
   3.
5. ಇ.ಪಿ. ಪ್ರಕಾರ ಹಣದ ಮೊತ್ತ (ಅಮಲ್ಜಾರಿವರೆಗೆ : ರೂ. ದಿ. ................. ರವರೆಗೆ ................ ನಂತರದ ಬಡ್ಡಿ ಮತ್ತು ವೆಚ್ಚ ..............................
6. ಯಾವ ರೀತಿಯ ಸಹಾಯ ಬೇಕಾಗಿದೆ. : ಎದುರು ಅರ್ಜಿದಾರರ ಚರ ಮತ್ತು ಸ್ಥಿರಾಸ್ತಿಗಳ ಜಪ್ತಿ ಮತ್ತು ಮಾರಾಟದಿಂದ ವಸೂಲಿ
7. ಶುಲ್ಕ ಚೀಟಿ (ಸ್ಲಿಪ್) ಅಮಲ್ಜಾರಿ ವೆಚ್ಚಗಳು : ಲೆಡ್ಜರ್ ಪುಟ ಸಂಖ್ಯೆ/ಸಂಚಿಕೆ

**8. ಸಾಲ ನೀಡಿರುವ ವಿವರಗಳು :**

| ದಿನಾಂಕ | ಸಾಲದ ಖಾತೆ ಸಂಖ್ಯೆ | ಅಮಲ್ಜಾರಿ ಕಡತದ ಮೊತ್ತ | ಸಾಲ ನೀಡಿರುವ ವಿವರಗಳು | | | ಹೆಚ್ಚುವರಿ ರೂ. ಪೈ. | ಮಾರಾಟಾದಿ ಕಾರಿಗಳ ಚಿಕ್ಕ ರುಜು |
|---|---|---|---|---|---|---|---|
| | | | ಸಾಲ ನೀಡಿದ ದಿನಾಂಕ | ವಿವರಗಳು | ಮೊತ್ತ ರೂ. ಪೈ. | | |
| | | | | | | | |

**9. ವಸೂಲಿ ಮಾಡಿದ್ದು :**

| ದಿನಾಂಕ | ಬೇಡಿಕೆ | | | ವಸೂಲಿ ಮಾಡಿದ ವಿವರಗಳು ರೂ. ಪೈ. | ಹೇಗೆ ಪಾವತಿಸಲಾಗಿದೆ | | |
|---|---|---|---|---|---|---|---|
| | ಅಮಲ್ಜಾರಿ ಅರ್ಜಿಯಲ್ಲಿನ ಹಣದ ಮೊತ್ತ ರೂ. ಪೈ. | ಅನಂತರದ ಬಡ್ಡಿ ರೂ. ಪೈ. | ಇತರೆ ವೆಚ್ಚ ರೂ. ಪೈ. | | ಸಂಬಂಧಪಟ್ಟ ಶಾಖೆ /ಪ್ರಧಾನ ಕಛೇರಿ ರೂ. ಪೈ. | ಖಜಾನೆ ರೂ. ಪೈ | ಇತರೇ ರೀತಿ |

ಅಮಲ್ಜಾರಿ ಅರ್ಜಿಯು ಸಮರ್ಪಕವಾಗಿದೆ. ಅಮಲ್ಜಾರಿಗಾಗಿ ಸಹಕಾರ ಸಂಘ/ ಬ್ಯಾಂಕ್, ಬೆಂಗಳೂರುನ ಮಾರಾಟಾಧಿಕಾರಿಗೆ ಅಧಿಕಾರ ನೀಡಲಾಗಿದೆ.

ಬೇಡಿಕೆ ಫಾ.ನಂ.2 ನೀಡಬಹುದು.

ಫಾ.ನಂ.6

ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಹಾಗೂ ವಸೂಲಾಧಿಕಾರಿಗಳು

ಅಮಲ್ ಬಜಾವಣೆ ಪ್ರಕರಣದ ವಿವರಗಳು

1. ಸಂಘ / ಬ್ಯಾಂಕಿನ ಹೆಸರು ಹಾಗೂ ವಿಳಾಸ :
2. ಸಾಲಗಾರನ ಹೆಸರು, ಹುದ್ದೆ ಹಾಗೂ ಅಂಚೆ ವಿಳಾಸ : 1.
3. ಜಾಮೀನುದಾರರ ಹೆಸರು, ಹುದ್ದೆ ಹಾಗೂ ಅಂಚೆ ವಿಳಾಸ : 2.

7ನೇ ಪುಟಕ್ಕೆ...

# ನಿಮ್ಮ ಪ್ರಶ್ನೆ ನಮ್ಮ ಉತ್ತರ






▸▸ **ಸುಧಾಕರ್ ಭಟ್**, ಬ್ಯಾಂಕಿಂಗ್ ಸಲಹೆಗಾರರು.

**01. ಆರ್ಥಿಕವಾಗಿ ಸದೃಢವಾದ ಮತ್ತು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವ ಪಟ್ಟಣ ಸಹಕಾರ ಬ್ಯಾಂಕುಗಳು ರಿಜರ್ವ್ ಬ್ಯಾಂಕಿನ ಅನುಮೋದನೆ ಇಲ್ಲದೆ ವರ್ಷಕ್ಕೆ ಒಂದು ಹೊಸ ಶಾಖೆಯನ್ನು ತೆರೆಯಬಹುದಾಗಿದೆ. ಈ ರೀತಿ ಹೊಸ ಶಾಖೆಯನ್ನು ತೆರೆಯುವ ಮುನ್ನ ಮಹಾಸಭೆಯ ಒಪ್ಪಿಗೆ ಅಗತ್ಯವೇ?**

**– ಪಟ್ಟಣ ಸಹಕಾರ ಬ್ಯಾಂಕ್ ಲಿ., ಶಿವಮೊಗ್ಗ ಜಿಲ್ಲೆ.**

**ಉತ್ತರ :** ಪಟ್ಟಣ ಸಹಕಾರ ಬ್ಯಾಂಕು ಹೊಸ ಶಾಖೆ ತೆರೆಯಲು ಮಹಾಸಭೆಯ ಒಪ್ಪಿಗೆ ಬೇಕಿಲ್ಲ.

**02. ನಮ್ಮ ಬ್ಯಾಂಕು ರಿಜರ್ವ್ ಬ್ಯಾಂಕಿನ ಅನುಮತಿ ಇಲ್ಲದೆ ಹೊಸ ಶಾಖೆ ತೆರೆಯಬಹುದಾಗಿದೆ. ನಮ್ಮ ಹಾಲಿ ಆಡಳಿತ ಮಂಡಳಿಯ ಅಧಿಕಾರಾವಧಿ ಫೆಬ್ರವರಿ 2025ರಂದು ಮುಕ್ತಾಯವಾಗಲಿದ್ದು, ಹೊಸ ಶಾಖೆಯನ್ನು ತೆರೆಯುವ ನಿರ್ಧಾರ ಕೈಗೊಳ್ಳಲು ಆಡಳಿತ ಮಂಡಳಿಗೆ ಕಾನೂನಿನ ಅನ್ವಯ ಅಧಿಕಾರವಿದೆಯೇ ಎಂಬುದರ ಕುರಿತು ಕಾನೂನು ಸಲಹೆ ನೀಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.**

**– ಪಟ್ಟಣ ಸಹಕಾರ ಬ್ಯಾಂಕ್ ಲಿ., ಶಿವಮೊಗ್ಗ ಜಿಲ್ಲೆ..**

**ಉತ್ತರ :** ಹೊಸ ಶಾಖೆಯನ್ನು ತೆರೆಯುವ ಸಮಯದಲ್ಲಿ ಚುನಾವಣಾ ನೀತಿ ಸಂಹಿತೆಯ ಉಲ್ಲಂಘನೆಯಾಗದಂತೆ ನೋಡಿಕೊಳ್ಳಬೇಕು. ನೀತಿ ಸಂಹಿತೆಯು ಚುನಾವಣಾ ವೇಳಾಪಟ್ಟಿಯನ್ನು ಪ್ರಕಟಿಸುವ ದಿನಾಂಕ ಅಥವಾ ರಾಜ್ಯ ಸಹಕಾರ ಚುನಾವಣಾ ಪ್ರಾಧಿಕಾರ ನಿಗದಿಪಡಿಸುವ ದಿನಾಂಕದಿಂದ ಚುನಾವಣೆ ಪ್ರಕ್ರಿಯೆ ಪೂರ್ಣಗೊಳ್ಳುವವರೆಗೆ ಅಥವಾ ಆಯೋಗ ಪ್ರಕಟಿಸಿದ ದಿನಾಂಕದವರೆಗೆ ಜಾರಿಯಲ್ಲಿರುತ್ತದೆ. ಈ ಅವಧಿಯಲ್ಲಿ ಬ್ಯಾಂಕಿನ ಹಾಲಿ ಅಧಿಕಾರದಲ್ಲಿರುವ ಆಡಳಿತ ಮಂಡಳಿಯವರು ಯಾವುದೇ ರೀತಿಯ ವಿಶೇಷ ಯೋಜನೆಗಳ ಅಥವಾ ಕಾರ್ಯಕ್ರಮಗಳು ಮುಂತಾದವುಗಳ ಬಗ್ಗೆ ಆಸ್ತಿಭಾರ ಹಾಕತಕ್ಕದ್ದಲ್ಲ. ಹೊಸ ಕಟ್ಟಡ ನಿರ್ಮಿಸಿದ್ದಲ್ಲಿ ಉದ್ಘಾಟನೆ ಕಾರ್ಯಕ್ರಮ ನಿಗದಿಪಡಿಸತಕ್ಕದ್ದಲ್ಲ. ಹೊಸ ಕಟ್ಟಡ ಕಟ್ಟಿಸುವ ಸಂಬಂಧ ಶಂಕು ಸ್ಥಾಪನೆ ಸಮಾರಂಭಗಳನ್ನು ನೆರವೇರಿಸತಕ್ಕದ್ದಲ್ಲ.

... 6ನೇ ಪುಟದಿಂದ

| | | | | | | |
|---|---|---|---|---|---|---|
| 4 | ಸದ್ಯ ಸಾಲಗಾರನಿಗೆ ಮಂಜೂರು ಮಾಡಿದ ಸಾಲದ ವಿವರಗಳು | | ಮಂಜೂರಾದ ಒಟ್ಟು ಮೊತ್ತ | ವಿತರಿಸಿದ ದಿನಾಂಕ | ಬಡ್ಡಿದರ | ಸಾಲಭರಿಸುವ ಕುರಿತು ನಿಗದಿಪಡಿಸಿದ ಒಟ್ಟು ಕಂತುಗಳು |
| | | | | | | |
| 5 | ಸಾಲಗಾರನು ಕೊನೆಯದಾಗಿ ಭರಿಸಿದ | | ಅಸಲು | ಬಡ್ಡಿ | ಯಾವ ದಿನಾಂಕದವರೆಗೆ | |
| | | | | | | |
| 6 | ಒಟ್ಟು ಬರಬೇಕಾದ ಸಾಲ (ಮೊತ್ತ) | | | | | |
| 7 | ದಾವಾ ಪ್ರಕರಣ ದಾಖಲು ಮಾಡಲು ಆಡಳಿತ ಮಂಡಳಿ ಠರಾಯಿಸಿದ ವಿವರ | | ಠರಾವು ಸಂಖ್ಯೆ | ದಿನಾಂಕ | | |
| 8 | ದಾವಾ ಪ್ರಕರಣ ದಾಖಲಿಸಿದ ಬಗ್ಗೆ ವಿವರಗಳು | | ದಾಖಲಿಸಿದ ದಿನಾಂಕ | ದಾವಾ ಮೊತ್ತ<br>ಅಸಲು ಬಡ್ಡಿ | | ಒಟ್ಟು ಮೊತ್ತ |
| 9 | ದಾವಾ ಪ್ರಕರಣದಕುರಿತು ಭರಿಸಿದ ವೆಚ್ಚ (ದಾವಾ ಶುಲ್ಕ) | | ಚಲನ್ ಸಂಖ್ಯೆ ಹಾಗೂ ದಿನಾಂಕ | | ಮೊತ್ತ | |
| 10 | ದಾವೆಯ ವಿವರಗಳು | | 1) ದಾವಾ ಪ್ರಕರಣದ ಸಂಖ್ಯೆ | | | |
| | | | 2) ಅವಾರ್ಡು ಪಾಸು ಮಾಡಿದ ದಿನಾಂಕ | | | |
| 11 | ಅಮಲ್ ಬಜಾವಣೆ ಪ್ರಕರಣ ದಾಖಲು ಮಾಡಲು ಆಡಳಿತ ಮಂಡಳಿ ಠರಾವಿನ ವಿವರಗಳು | | ಠರಾವು ಸಂಖ್ಯೆ | | ದಿನಾಂಕ | |
| 12 | ಅಮಲ್‌ಬಜಾವಣೆಕುರಿತು ಪ್ರಕರಣ ದಾಖಲಿಸಿದ ವಿವರ (ಶುಲ್ಕ) | | | | | |
| 13 | ಅಮಲ್‌ಬಜಾವಣೆ ಪ್ರಕರಣದನ್ವಯ ಸಾಲಗಾರನಿಂದ ವಸೂಲಿಸಬೇಕಾದ ಸಾಲದ ವಿವರಗಳು | | ಬರಬೇಕಾದ ಅಸಲು | | ರೂ. | |
| | | | ಬಡ್ಡಿ | | ರೂ. | |
| | | | ಬಡ್ಡಿದರ | | | |
| | | | ಯಾವ ದಿನಾಂಕದಿಂದ | | | |
| | | | ದಂಡದ ಬಡ್ಡಿ | | ರೂ. | |
| | | | ದಂಡದ ಬಡ್ಡಿದರ | | | |
| | | | ಯಾವ ದಿನಾಂಕದಿಂದ | | | |
| | | | ಇತರೆ ಖರ್ಚುಗಳು | | ರೂ. | |
| | | | ಅಮಲ್ದಾರಿ ವೆಚ್ಚ | | ರೂ. | |
| | | | ಒಟ್ಟು ವಸೂಲಿಸಬೇಕಾದ ಮೊತ್ತ.............. | | ರೂ. | |
| | | | ದಿನಾಂಕದಂದು ಇದ್ದಂತೆ | | | |

ಮುಂದಿನ ಸಂಚಿಕೆಗೆ...

# 71ನೇ ಅಖಿಲ ಭಾರತ ಸಹಕಾರ ಸಪ್ತಾಹ – 2024

## ಧ್ಯೇಯ : "ವಿಕಸಿತ ಭಾರತ" ನಿರ್ಮಾಣದಲ್ಲಿ ಸಹಕಾರ ಸಂಸ್ಥೆಗಳ ಪಾತ್ರ

ರಾಷ್ಟ್ರೀಯ ಸಹಕಾರ ಯೂನಿಯನ್, ನವದೆಹಲಿ ಇವರ ಮಾರ್ಗದರ್ಶನದಲ್ಲಿ ದೇಶಾದ್ಯಂತ ನವೆಂಬರ್ 14 ರಿಂದ ನವೆಂಬರ್ 20, 2024 ರವರೆಗೆ 71ನೇ ಅಖಿಲ ಭಾರತ ಸಹಕಾರ ಸಪ್ತಾಹವನ್ನು "ವಿಕಸಿತ ಭಾರತ" ನಿರ್ಮಾಣದಲ್ಲಿ ಸಹಕಾರ ಸಂಸ್ಥೆಗಳ ಪಾತ್ರ ಎಂಬ ಧ್ಯೇಯದೊಂದಿಗೆ 7 ದಿನಗಳ ಪ್ರತ್ಯೇಕ ದಿನದ ವಿಷಯಗಳೊಂದಿಗೆ ರಾಜ್ಯದ ಎಲ್ಲಾ ಸಹಕಾರ ಸಂಸ್ಥೆಗಳು ಪರಿಣಾಮಕಾರಿಯಾಗಿ ಸಹಕಾರ ಸಪ್ತಾಹವನ್ನು ಆಚರಿಸಲು ಈ ಮೂಲಕ ಕೋರಿದೆ.

| 7 ದಿನಗಳ ಆಚರಣೆಯ ಶೀರ್ಷಿಕೆಗಳು | |
|---|---|
| 14.11.2024 ಗುರುವಾರ | ಸಹಕಾರ ಸಚಿವಾಲಯದ ನೂತನ ಪ್ರಯತ್ನಗಳ ಮೂಲಕ ಸಹಕಾರ ಚಳವಳಿಯನ್ನು ಬಲಪಡಿಸುವುದು. |
| 15.11.2024 ಶುಕ್ರವಾರ | ಸಹಕಾರ ಸಂಸ್ಥೆಗಳಲ್ಲಿ ಅನ್ವೇಷಣೆ, ತಾಂತ್ರಿಕತೆ ಮತ್ತು ಉತ್ತಮ ಆಡಳಿತ |
| 16.11.2024 ಶನಿವಾರ | ಉದ್ಯಮಶೀಲತೆ, ಉದ್ಯೋಗ ಮತ್ತು ಕೌಶಲ್ಯಾಭಿವೃದ್ಧಿಯನ್ನು ಉತ್ತೇಜಿಸುವಲ್ಲಿ ಸಹಕಾರ ಸಂಸ್ಥೆಗಳ ಪಾತ್ರ |
| 17.11.2024 ಭಾನುವಾರ | ಸಹಕಾರಿ ಉದ್ಯಮಗಳಲ್ಲಿ ಪರಿವರ್ತನೆ |
| 18.11.2024 ಸೋಮವಾರ | ಸಹಕಾರ ಸಂಸ್ಥೆಗಳ ನಡುವೆ ಸಹಕಾರವನ್ನು ಬಲಪಡಿಸುವುದು |
| 19.11.2024 ಮಂಗಳವಾರ | ಮಹಿಳೆಯರು, ಯುವಕರು ಮತ್ತು ಅಬಲವರ್ಗಗಳಿಗಾಗಿ ಸಹಕಾರ ಸಂಸ್ಥೆಗಳು |
| 20.11.2024 ಬುಧವಾರ | ಉತ್ತಮ ವಿಶ್ವ ನಿರ್ಮಾಣ ಹಾದಿಗಾಗಿ ಹಾಗೂ ಸುಸ್ಥಿರ ಅಭಿವೃದ್ಧಿ ಗುರಿ ಸಾಧನೆಯಲ್ಲಿ ಸಹಕಾರ ಸಂಸ್ಥೆಗಳ ಪಾತ್ರ |

ಸಂಪಾದಕರು :
**ಪುಂಡಲೀಕ ಎನ್. ಕೇರೂರೆ,**
ಮುಖ್ಯಕಾರ್ಯನಿರ್ವಹಣಾಧಿಕಾರಿ,
ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳ ನಿ.,
ಬೆಂಗಳೂರು.

ಇವರಿಗೆ,

Edited, Published and printed by Pundalik N. Kerure, C.E.O. on behalf of the Karnataka State Co-operative Urban Banks Federation Ltd., Bangalore - 560027.
Published at : # 132, K.H. Road, Bangalore - 560027.
Printed at : Navarathna Printers, # 35, 3rd Cross, Sudhamanagar, Bangalore – 560027.